ಹೆಚ್ಚಿನದೇನೂ ಇರಲಾರದೆಂದು ಅವನು ಭಾವಿಸಿದ್ದ.

ಏನಿದು 'ರಾಜ ರಸಪಾಕ' (ರಾಯಲ್ ಜೆಲ್ಲಿ) ಎಂಬ ವಿಶೇಷ ವಸ್ತು?

ಆಗತಾನೇ ಮೊಟ್ಟೆಯನ್ನೊಡೆದು ಹೊರಬರುವ ಜೇನ್ನೊಣಗಳ ಮರಿ ಹುಳುಗಳು ಅಥವಾ ಲಾರ್ವಾಗಳಿಗೆ ಉಣಿಸಲು ದಾದಿ ಜೇನ್ನೊಣಗಳು ತಮ್ಮ ವಿಶಿಷ್ಟ ಗ್ರಂಥಿಗಳಿಂದ ಹೊರ ಸ್ರವಿಸುವ ವಸ್ತುವನ್ನು ರಾಜ ರಸಪಾಕವೆನ್ನುತ್ತಾರೆ. ಸಸ್ತನಿಗಳು ತಮ್ಮ ಮರಿಗಳಿಗೆ ಮೊಲೆ ಹಾಲು ಕುಡಿಸಿದಂತೆ ದಾದಿ ಜೇನ್ನೊಣಗಳು ಮರಿ ಹುಳಗಳಿಗೆ ತಮ್ಮ ಗಂಟಲ ಕೆಳಭಾಗದಲ್ಲಿರುವ ಗ್ರಂಥಿಗಳಿಂದ ಒಸರುವ ರಸಪಾಕ ಉಣಿಸಿ ಸಾಕುತ್ತವೆ. ಇದನ್ನು ರಾಜ ರಸಪಾಕವೆನ್ನುತ್ತಾರೆ. ಜೀವವಿಜ್ಞಾನದಲ್ಲಿ ಇದೊಂದು ಅಪೂರ್ವ ಸಂಗತಿ. ಏಕೆಂದರೆ, ಜೇನ್ನೊಣಗಳನ್ನು ಬಿಟ್ಟರೆ ಬೇರೆ ಯಾವ ಕೀಟಗಳಲ್ಲೂ ಈ ವಿದ್ಯಮಾನ ಕಾಣಿಸುವುದಿಲ್ಲ.

ಮೊಟ್ಟೆಗಳಿಂದ ಹೊರಬಂದ ಹುಳುಗಳಿಗೆ ಮೊದಲ ಮೂರು ದಿನ ಅಪ್ಪಟವಾದ ರಸಪಾಕ ಉಣಿಸಲಾಗುತ್ತದೆ. ನಂತರ ಸೇವಕ ಜೇನ್ನೊಣಗಳು (ಡ್ರೋನ್ಸ್) ಇವುಗಳಿಗೆ ರಸಪಾಕವನ್ನು ಜೇನಿನಲ್ಲಿ ಅಥವಾ ಪರಾಗದಲ್ಲಿ (ಪೊಲ್ಲೆನ್) ಬೆರೆಸಿ ಕೊಡುತ್ತವೆ. ಮತ್ತೊಂದು ವಿಶೇಷ ಸಂಗತಿ ಎಂದರೆ ರಾಣಿ ಜೇನ್ನೊಣ (ಕ್ವೀನ್ ಬೀ) ಆಗುವಂತ ಹುಳಕ್ಕೆ ಮಾತ್ರ ಅದರ ಶೈಶವಾವಸ್ಥೆಯ ಕೊನೆಯವರೆಗೂ ರಾಜ ರಸಪಾಕವನ್ನೇ ಉಣಿಸಲಾಗುತ್ತದೆ!

ಮೇಲೆ ಬೆಡ್‌ರೂಮಿನಿಂದ ಮೇಬಲಳ ಹೆಜ್ಜೆ ಸಪ್ಪಳ ನಿಂತಿತ್ತು. ಎಲ್ಲೆಡೆ ದಟ್ಟವಾದ ಮೌನ ಹರಡಿತ್ತು. ಆಲ್ಬರ್ಟ್ ಶುಚಿಗೊಳಿಸಿದ ಪೈಪಿಗೆ ತಂಬಾಕು ತುಂಬಿ ಕಡ್ಡಿ ಗೀರಿದ.

ರಾಜ ರಸಪಾಕವೆಂದು ಕರೆಯಲ್ಪಡುವ ಈ ಆಹಾರ ತುಂಬಾನೇ ಪುಷ್ಟಿದಾಯಕವೆಂದು ತೋರುತ್ತದೆ. ಇದನ್ನು ಸೇವಿಸಿದ ಜೇನು ಹುಳಗಳು ಐದು ದಿನಗಳಲ್ಲೇ ಸುಮಾರು 1,500 ಪಟ್ಟು ತೂಕವನ್ನು ಹೆಚ್ಚಿಸಿಕೊಳ್ಳುತ್ತವೆ!

ಇದು ನಿಜವೆಂದು ಅವನು ಅರಿತಿದ್ದನಾದರೂ ಆ ಲೇಖನದಲ್ಲಿ ಉಲ್ಲೇಖಿಸಿದ್ದ ತೂಕದ ಹೆಚ್ಚಳ ಅವನ ಹುಬ್ಬೇರಿಸಿತು. ಇದರ ಅರ್ಥ ಸುಮಾರು ಮೂರೂವರೆ ಕೆ.ಜಿ. ತೂಗುವ ಮಗು ಐದು ದಿನಗಳಲ್ಲೇ ಐದು ಟನ್ನು ತೂಗುವಷ್ಟು! ಆಲ್ಬರ್ಟ್ ಇದನ್ನು ಒಂದೆರಡು ಸಲವಲ್ಲ, ಮೂರು ಬಾರಿ ಓದಿ ಖಾತ್ರಿಪಡಿಸಿಕೊಂಡ. ನಂತರ, ಅಲ್ಲಿಂದಲೇ, "ಮೇಬಲ್!... ಮೇಬಲ್!..." ಎಂದು ಉದ್ವೇಗದಿಂದ ಕೂಗಿಕೊಂಡ.

ಅವಳಿಂದ ಯಾವುದೇ ಪ್ರತ್ಯುತ್ತರ ಬರಲಿಲ್ಲ. ಅವನು ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಹೋದ. ಬೆಡ್‌ರೂಮಿನ ಕದ ಮುಚ್ಚಿತ್ತು. ಅವನು ಮೆಲ್ಲಗೆ ಒಳಗೆ ಹೋದ. ಅಂಧಕಾರ ಕವಿದಿತ್ತು. ಆದರೂ, "ಮೇಬಲ್... ಸ್ವಲ್ಪ ಕೆಳಗೆ ಬಾ. ನಿನಗೆ ಏನೋ ತೋರಿಸಬೇಕು!... ಮಗುವಿನ ಬಗ್ಗೆ..." ಎಂದ ಕಾತರದಿಂದ.

ಮೇಬಲ್ ಸ್ವಿಚ್ ಹಾಕಿದಳು. ಅವಳು ಬೋರಲು ಮಲಗಿ ದಿಂಬಿಗೆ ಮುಖ ಆನಿಸಿ ಮುಸಿ ಮುಸಿ ಅಳುತ್ತಿದ್ದಳು.

ಅವನು ಕಕ್ಕುಲಾತಿಯಿಂದ ಅವಳನ್ನು ತಬ್ಬಿಕೊಂಡು, "ಸ್ವಲ್ಪ ಕೆಳಗೆ ಬಾ ಮೇಬಲ್. ನಾನು ಹೇಳಲಿಕ್ಕಿರುವುದು ಖಂಡಿತವಾಗಿಯೂ ವಿಶೇಷವಾಗಿದೆ ಎಂದು ನನಗನಿಸುತ್ತದೆ." ಎಂದ.

"ಆಲ್ಬರ್ಟ್ ನನಗೆ ಸುಸ್ತಾಗಿದೆ. ದಯವಿಟ್ಟು ನನಗೆ ಕಿರಿಕಿರಿ ಮಾಡಬೇಡ." ಅವಳು ಗೋಗರೆದಳು.

"ನನ್ನ ಮೇಲೆ ನಿನಗೆ ವಿಶ್ವಾಸವಿಲ್ಲ?"

"ಆ..ಲ್ಬ..ರ್ಟ್..?!" ಅವಳು ಬಿಕ್ಕಿದಳು.